CC No.2335/2022
CW-4  PW-4

**ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು  ಜೆ.ಎಂ.ಎಫ್.ಸಿ ನ್ಯಾಯಾಲಯ, ಸೊರಬ**

**ಸಿ ಸಿ ನಂ.  2335/2022**

**ಹೆಸರು** :- **ದತ್ತಾತ್ರೇಯ**

**ತಂದೆಯ ಹೆಸರು** :- **ರಾಮಚಂದ್ರಪ್ಪ**

**ವಯಸ್ಸು** :- **45 ವರ್ಷ**

**ಉದ್ಯೋಗ** :- **ವ್ಯವಸಾಯ**

**ಸ್ಥಳ** :- **ಚಿಕ್ಕಪೇಟೆ, ಸೊರಬ**

**ದಿನಾಂಕಃ 22.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ 14.02.2022 ರಂದು ರಾತ್ರಿ 9.10 ಗಂಟೆ ಸಮಯದಲ್ಲಿ ನಮ್ಮ ಮನೆಯ ಎದುರುಗಡೆ ಇರುವ ಚಾಸಾ-3 ರವರಿಗೆ ಸೇರಿದ ಸೈಟಿನಲ್ಲಿ ಜಗಳದ ಶಬ್ದ ಕೇಳುತ್ತಿತ್ತು. ಆಗ ನಾವು ಮನೆಯಿಂದ ಹೊರಗೆ ಬಂದು ನೋಡಿದಾಗ ಆರೋಪಿತರು ಎಲ್ಲರೂ ಸ್ಥಳದಲ್ಲಿ ಹಾಜರಿದ್ದು, ಚಾಸಾ-2 ರವರು ಕಾರಿನ ಒಳಗಡೆ ಇದ್ದು, ಚಾಸಾ-1 ರವರಿಗೆ ಆರೋಪಿತರು ಎಲ್ಲರೂ ಸೇರಿ ಚಾಸಾ-1 ರವರ ಜುಟ್ಟನ್ನು ಹಿಡಿದು ಎಳೆದಾಡಿ, 3 ರಿಂದ 5 ನೇ ಆರೋಪಿತರು ಚಾಸಾ-1 ರವರಿಗೆ ಚಪ್ಪಲಿ ಕಾಲಿನಿಂದ ಒದ್ದಿರುತ್ತಾರೆ. ನಾನು ಮತ್ತು ಚಾಸಾ-5 ರವರು ಗಲಾಟೆಯನ್ನು ಬಿಡಿಸಿ ಚಾಸಾ-1 ರವರನು  ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. 1 ನೇ ಆರೋಪಿಯು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಈ ಬಗ್ಗೆ

ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದು, ಪೊಲೀಸರ ಮುಂದೆ ನಾನು ದಿಃ22.03.2022 ರಂದು ಹೇಳಿಕೆ ನೀಡಿರುತ್ತೇನೆ. ಆ ದಿನ ಚಾಸಾ–1 ರವರ ಮೇಲೆ ಹಲ್ಲೆ ಮಾಡಿದ ಆರೋಪಿತರನ್ನು ನೋಡಿ ಗುರುತಿಸುತ್ತೇನೆ. ಈ ದಿನ 1 ಮತ್ತು 2 ನೇ ಆರೋಪಿತರು ನ್ಯಾಯಾಲಯದ ಮುಂದೆ ಹಾಜರಿದ್ದು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. 3 ರಿಂದ 5 ನೇ ಆರೋಪಿತರು ಗೈರು ಹಾಜರಿದ್ದು, ಆರೋಪಿ ಪರ ವಕೀಲರು 3 ರಿಂದ 5 ನೇ ಆರೋಪಿತರ ಗುರುತಿಸುವಿಕೆಯಲ್ಲಿ ಯಾವುದೇ ತಕರಾರು ಇಲ್ಲ ಎಂದು ವಿನಾಯಿತಿ ಅರ್ಜಿ ಸಲ್ಲಿಸಿ ವಿನಾಯಿತಿ ಪಡೆದುಕೊಂಡಿರುತ್ತಾರೆ.

(**ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯು ಅಭಿಯೋಜನಾ ಪ್ರಕರಣಕ್ಕೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಸಾಕ್ಷಿಯು ಅಭಿಯೋಜನಾ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದ ಕಾರಣ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು**).

**ಪಾಟಿ ಸವಾಲುಃ ಮಾನ್ಯ ಸ.ಸ.ಅಭಿಯೋಜಕವರಿಂದಃ**

1 ರಿಂದ 5 ನೇ ಆರೋಪಿತರು ಚಾಸಾ–1 ರವರ ಜಾಗಕ್ಕೆ ಅಕ್ರಮ ಪ್ರವೇಶ ಮಾಡಿ ಚಾಸಾ–1 ರವರಿಗೆ ಹಲ್ಕಾ ಸೂಳೇ ಮುಂಡೆ, ಬೇವರ್ಸಿ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. 3 ರಿಂದ 5 ನೇ ಆರೋಪಿತರು ಚಾಸಾ–1 ರವರಿಗೆ ಎದಗೆ, ಮೈಕೈಗೆ ಕೈಯಿಂದ ಗುದ್ದಿ ಚಪ್ಪಲಿ ಕಾಲಿನಿಂದ ಒದ್ದು, ಸಾರ್ವಜನಿಕರ ಮದ್ಯೆ ಮಾನಕ್ಕೆ ಕುಂದುಂಟಾಗುವಂತೆ ನಡೆದುಕೊಂಡಿರುತ್ತಾರೆ ಅಂದರೆ ಸರಿ.

**ಪಾಟಿ ಸವಾಲುಃ ಆರೋಪಿ ಪರ ಶ್ರೀ. ಎ.ಸಿ.ವೈ. ವಕೀಲರಿಂದಃ**

1 ನೇ ಆರೋಪಿತಳು ಪ್ರಸನ್ನ ಎನ್ನುವವರ ಮೇಲೆ ಒಂದು ದೂರು ದಾಖಲಿಸಿದ ಬಗ್ಗೆ ಮಾಹಿತಿ ಇದೆಯಾ ಅಂದರೆ ಇಲ್ಲ. ನಾನು ಹೇಳುವಂತಹ ಘಟನೆ ದಿನ ಸಂಜೆ 6.30 ಕ್ಕೆ 1 ನೇ ಆರೋಪಿತಳು ತನ್ನ ಮೇಲೆ ಆದ ಹಲ್ಲೆಯ ಹಿನ್ನಲೆಯಲ್ಲಿ ದೂರು ಸಲ್ಲಿಸಲು ಪೊಲೀಸ್ ಠಾಣೆಯಲ್ಲಿ ಹಾಜರಿದ್ದಳು ಅಂದರೆ ಸರಿಯಲ್ಲ. ನಾನು ಈ ದಿನ ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಚಾಸಾ–3 ರವರೊಂದಿಗೆ ಬಂದಿರುತ್ತೇನೆ ಅಂದರೆ ಸಾಕ್ಷಿಯು ಪೊಲೀಸರು ಕರೆ ಮಾಡಿದ್ದಕ್ಕೆ ಬಂದಿರುತ್ತೇನೆ. ನಾನು ಘಟನಾ ಸ್ಥಳಕ್ಕೆ ಹೋಗುವ ಪೂರ್ವದಲ್ಲಿಯೇ ಚಾಸಾ–1 ರವರು ಕಳಗೆ ಬಿದ್ದಿರುತ್ತಾರೆ. ಚಾಸಾ–3 ರವರ ಕಾರಿನ ಶೆಡ್ ನಲ್ಲಿ ಯಾವುದೇ ಬೆಳಕಿನ ವ್ಯವಸ್ಥೆ ಇಲ್ಲ ಅಂದರೆ ಸರಿ. ನಾನು ಹೇಳಿದಂತೆ ಚಾಸಾ–1 ರವರ ಮನೆಯ ಮುಂದೆ ಯಾವುದೇ ಗಲಾಟೆ ಆಗಿರುವುದಿಲ್ಲ. 1 ನೇ ಆರೋಪಿತಳು ಪ್ರಸನ್ನ ರವರ ವಿರುದ್ಧ ದೂರು ದಾಖಲಿಸಿದ್ದಕ್ಕೆ ಈ ಸುಳ್ಳು ಪ್ರಕರಣವನ್ನು ದಾಖಲಿಸಿದ್ದು, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಚಾಸಾ–3 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಗಲಾಟೆ ಆಗಿರುವುದಿಲ್ಲ ಅಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**